ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡ ನಗರಸಭೆ ಮತ್ತು ಪುರಸಭೆ ಪ್ರದೇಶಗಳ ಅಭಿವೃದ್ಧಿಗೆ 2016-17ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ರೂ.250.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್ಎಫ್ಸಿ 2016 (ಭಾಗ-1), ದಿನಾಂಕ: 21-06-2016.
2. ಸರ್ಕಾರದ ಆದೇಶ ಸಂಖ್ಯೆ: ನಅಇ 175 ಎಸ್ಎಫ್ಸಿ 2016, ದಿನಾಂಕ: 05-07-2016.
3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆಯುಕ್ತರು/ಪಿಆರ್/640/2016-17, ದಿನಾಂಕ: 08-02-2017.

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 21-06-2016ರ ಆದೇಶದಲ್ಲಿ 2016-17 ಮತ್ತು 2017-18ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಒಟ್ಟು ರೂ.7300.00 ಕೋಟಿಗಳ ಅಂದಾಜು ವೆಚ್ಚದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ರೂ.7300.00 ಕೋಟಿಗಳ ಪೈಕಿ ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಹೊಸದಾಗಿ ಸೇರಿಸಲಾಗಿರುವ 110 ಹಳ್ಳಿಗಳ ಅಭಿವೃದ್ಧಿಗಾಗಿ ರೂ.250.00 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ಅದರಂತೆ ಸದರಿ ಮೊತ್ತದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ಪಡೆಯುವಂತೆ ಆದೇಶಿಸಲಾಗಿದೆ.

2. ಮೇಲೆ (2) ರಲ್ಲಿ ಓದಲಾದ ದಿನಾಂಕ: 05-07-2016ರ ಆದೇಶದಲ್ಲಿ 110 ಹಳ್ಳಿಗಳ ಅಭಿವೃದ್ಧಿಗಾಗಿ ರೂ.250.00 ಕೋಟಿಗಳನ್ನು ಕ್ಷೇತ್ರವಾರು ಈ ಕೆಳಕಂಡಂತೆ ವಿಂಗಡಣೆ ಮಾಡಲಾಗಿದೆ.

(ರೂ. ಕೋಟಿಗಳಲ್ಲಿ)

ಕ್ರ.ಸಂ	ಮತ ಕ್ಷೇತ್ರದ ಹೆಸರು	ಅನುದಾನ
1	ಕೆ.ಆರ್.ಪುರಂ	40.00
2	ಯಶವಂತಪುರ	40.00
3	ರಾಜರಾಜೇಶ್ವರಿನಗರ	40.00
4	ಬ್ಯಾಟರಾಯನಪುರ	40.00
5	ಬೆಂಗಳೂರು ದಕ್ಷಿಣ	15.00
6	ಯಲಹಂಕ	10.00
7	ಮಹದೇವಪುರ	15.00
8	ದಾಸರಹಳ್ಳಿ	10.00
9	ಸರ್ವಜ್ಞನಗರ	25.00
10	ಬೊಮ್ಮನಹಳ್ಳಿ	15.00
	ಒಟ್ಟು ಮೊತ್ತ	**250.00**

. . . 2 .

3. ಆಯುಕ್ತರ ಪ್ರಸ್ತಾವನೆಯನ್ವಯ ಸರ್ಕಾರವು ಈ ಕೆಳಕಂಡ ವಿಧಾನಸಭಾ ಕ್ಷೇತ್ರಗಳ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ.

ಕ್ರ ಸಂ.	ವಿಧಾನಸಭಾ ಕ್ಷೇತ್ರಗಳು	ಸರ್ಕಾರದ ಆದೇಶ ಹೊರಡಿಸಿದ ದಿನಾಂಕ	ಮೊತ್ತ (ರೂ.ಕೋಟಿಗಳಲ್ಲಿ)
1	ಕೆ.ಆರ್.ಪುರಂ ಯಶವಂತಪುರ ಸರ್ವಜ್ಞನಗರ	05-07-2016	105.00
2	ಮಹದೇವಪುರ ಬೆಂಗಳೂರು ದಕ್ಷಿಣ	14-12-2016	30.00
3	ದಾಸರಹಳ್ಳಿ ಬೊಮ್ಮನಹಳ್ಳಿ	31-12-2016	25.00
4.	ರಾಜರಾಜೇಶ್ವರಿನಗರ	06-03-2017	40.00
		ಒಟ್ಟು	**200.00**

4. ಮೇಲೆ (3) ರಲ್ಲಿ ಓದಲಾದ ಆಯುಕ್ತರ ದಿನಾಂಕ: 08-02-2017ರ ಪ್ರಸ್ತಾವನೆಯಲ್ಲಿ ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿರುವ ರೂ.10.00 ಕೋಟಿಗಳ ವೆಚ್ಚದಲ್ಲಿ ಒಟ್ಟು 15 ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

5. ದಿನಾಂಕ: 21-06-2016ರ ಆದೇಶದಲ್ಲಿ, 2016-17 ಮತ್ತು 2017-18ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಒಟ್ಟು ರೂ.7300.00 ಕೋಟಿಗಳ ಅಂದಾಜು ವೆಚ್ಚದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ಈಗಾಗಲೇ ಕೆ.ಆರ್.ಪುರಂ, ಯಶವಂತಪುರ, ಸರ್ವಜ್ಞನಗರ, ಮಹದೇವಪುರ, ಬೆಂಗಳೂರು ದಕ್ಷಿಣ, ದಾಸರಹಳ್ಳಿ, ಬೊಮ್ಮನಹಳ್ಳಿ ಮತ್ತು ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರಗಳ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿರುವುದರಿಂದ, ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯನ್ವಯ ಯಲಹಂಕ ವಿಧಾನಸಭಾ ಕ್ಷೇತ್ರದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಉದ್ದೇಶಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 175 ಎಸ್‌ಎಫ್‌ಸಿ 2016,
ಬೆಂಗಳೂರು, ದಿನಾಂಕ: 20-04-2017.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಸೇರಿಸಲ್ಪಟ್ಟ 110 ಹಳ್ಳಿಗಳ ಅಭಿವೃದ್ಧಿಗಾಗಿ ನಿಗಧಿಪಡಿಸಿರುವ ರೂ.250.00 ಕೋಟಿಗಳ ಅನುದಾನದಿಂದ ಈ ಕೆಳಕಂಡ ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಳ್ಳುವ ರೂ.10.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕ್ರಮ ಸಂಖ್ಯೆ	ವಾರ್ಡ್ ನಂ.	ಕಾಮಗಾರಿಗಳ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	1 & 2	Drillings of bore wells and providing pipe line work in ward no.01 and 02 of Yelahanka sub division.	50.00
2.	1	Improvements and asphalting to new post office main road and cross roads in ward no.01.	35.00

...3.

3.	1	Improvements and asphalting to Suggappa layout cross roads in ward no.01.	40.00
4.	1	Improvemnts and asphalting to Shanimahatma Swamy temple road and Surabhi layout 2nd main and cross roads in ward no.1.	40.00
5.	1	Providing and fixing furniture and interior works to Mini Vidhana Soudha at Yelahanka In ward no.01.	100.00
6.	1	Providing open Gym at Yelahanka Lake in ward no.1.	50.00
7.	2	Improvements to road adjacent to Yelahanka lake from Kenchanahalli to Chowdeshwari Temple in ward no.02 of Yelahanka Sub Division.	300.00
8.	2	Construction of additional floor over existing Samudaya Bhavan near Venugopal Swamy Temple in ward no.02.	70.00
9.	3	Improvements and asphalting to 3rd, 4th and 5th main roads of Attur layout in Attur ward no.03.	95.00
10.	3	Improvements and asphalting to 2nd main road of Muneshwara layout in Attur ward no.03.	40.00
11.	3	Improvements and asphalting to 10th and 11th cross roads of Muneshwara layout in Attur ward no.03.	50.00
12.	3	Construction of rangamandira at 5th phase paly ground and repair works in Vivekananda park in Attur ward no.03.	50.00
13.	3	Improvements to park near Dairy Circle in Attur ward no.03.	20.00
14.	3	Providing Chain – Link pencing to park Opp. BWSSB office in Attur Ward no.03	10.00
15.	4	Asphalting to balance roads in A and B sector of Yelahanka New Town in ward no.04.	50.00
		Total	1000.00

ಷರತ್ತುಗಳು:-

1. ಈ ಆದೇಶದಲ್ಲಿ ನೀಡಿರುವ ಅನುಮೋದನೆಯು ಕಾಮಗಾರಿಗಳ ಪಟ್ಟಿಗೆ ನೀಡಿರುವ ಅನುಮೋದನೆಯೇ ಹೊರತು, ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ನೀಡಿರುವ ಆಡಳಿತಾತ್ಮಕ ಅನುಮೋದನೆಯಲ್ಲ. ಆದ್ದರಿಂದ, ಅನುಮೋದನೆಗೊಂಡ ಕಾಮಗಾರಿಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಡಿಪಿಆರ್‌ಗಳನ್ನು ಸಿದ್ಧಪಡಿಸಿ, ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಅನುಮೋದನೆ ಪಡೆದು, ರೂ.10.00 ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್‌ಗಳನ್ನು ಮಾಡಿ, ಸದರಿ ಪ್ಯಾಕೇಜ್ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು-2000, ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 20 ಇಜಿವಿ 2009 (4), ದಿನಾಂಕ: 13-07-2009 ರಲ್ಲಿನ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಬಿ.ಬಿ.ಎಂ.ಪಿ. ವತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

2. ಈ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ 1999 ರನ್ವಯ್ಯ ಕ್ರಮ ವಹಿಸಲು ಮತ್ತು ಮೇಲೆ ಓದಲಾದ (4)ರ ಆದೇಶದಲ್ಲಿ ರಚಿಸಲಾದ ಅಧಿಕಾರಯುಕ್ತ ಸಮಿತಿಯಿಂದ ಹಾಗೂ ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸತಕ್ಕದ್ದು.

...4.

3. ಈ ಕ್ರಿಯಾ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿರುವ ಕಾಮಗಾರಿಗಳು ಇತರೆ ಯಾವುದೇ ಯೋಜನೆ/ಅನುದಾನದಡಿಯಲ್ಲಿ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಆಯುಕ್ತರು, ಬಿ.ಬಿ.ಎಂ.ಪಿ.ರವರು ಪೂರ್ವಾನ್ವಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

4. ಅನುಮೋದನೆ ನೀಡಲಾದ ಕ್ರಿಯಾಯೋಜನೆಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು. ಅನಿವಾರ್ಯ ಕಾರಣಗಳಿಂದ ಬದಲಾವಣೆಗಳು ಅತ್ಯಂತ ಅವಶ್ಯಕ ಎಂದು ಕಂಡುಬಂದಲ್ಲಿ ಅಂತಹ ಕಾಮಗಾರಿಗಳನ್ನು ಸೂಕ್ತ ಸಮಜಾಯಿಷಿಯೊಂದಿಗೆ ಆಯುಕ್ತರು, ಬಿ.ಬಿ.ಎಂ.ಪಿ. ಇವರು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

5. ಮೇಲೆ ಓದಲಾದ (4)ರ ಆದೇಶದಲ್ಲಿ ರಚಿಸಲಾಗಿರುವ ಅಧಿಕಾರಯುಕ್ತ ಸಮಿತಿಯು ಈ ಆದೇಶದಲ್ಲಿ ಅನುಮೋದಿಸಲಾದ ಕಾಮಗಾರಿಗಳ ಪ್ರಗತಿ ಪರಿಶೀಲನೆಯನ್ನು ಆಗಿಂದ್ದಾಗೆ ನಡೆಸತಕ್ಕದ್ದು.

6. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಬಿ.ಬಿ.ಎಂ.ಪಿ.ಯ ಪ್ರಧಾನ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರು ನಿಗಾವಹಿಸಿ, ಉತ್ತಮ ಗುಣಮಟ್ಟದ ಆಸ್ತಿ ಸೃಜನೆಗೆ ಕಟ್ಟುನಿಟ್ಟಿನ ಕ್ರಮವಹಿಸತಕ್ಕದ್ದು.

7. ಆಯುಕ್ತರು, ಬಿ.ಬಿ.ಎಂ.ಪಿ.ರವರು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರತಿಷ್ಠಿತ ಸಂಸ್ಥೆಗಳಿಂದ ಗುಣಮಟ್ಟದ ತಪಾಸಣಾ ಕೈಗೊಂಡು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

8. ಅನುಮೋದಿತ ಕಾಮಗಾರಿಗಳನ್ನು 2016-17 ಮತ್ತು 2017-18ನೇ ಸಾಲಿನಲ್ಲಿ ನಗರೋತ್ಥಾನ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯ ಅನುದಾನಗಳಡಿ ಅನುಷ್ಠಾನಗೊಳಿಸುವುದು.

9. ಈ ಆದೇಶದಲ್ಲಿ, ಅನುಮೋಡನೆ ನೀಡಿರುವ ಮೊತ್ತಕ್ಕಿಂತ ಕಾಮಗಾರಿಗಳ ಅನುಷ್ಠಾನ ಮೊತ್ತವು ಹೆಚ್ಚುವರಿಯಾದಲ್ಲಿ ಸದರಿ ಹೆಚ್ಚುವರಿ ಅನುದಾನವನ್ನು ಬಿ.ಬಿ.ಎಂ.ಪಿ.ಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು. ಸರ್ಕಾರದಿಂದ ಹೆಚ್ಚುವರಿ ಅನುದಾನವನ್ನು ಒದಗಿಸಲಾಗುವುದಿಲ್ಲ.

10. ಈ ಆದೇಶದಲ್ಲಿ, ಅನುಮೋದನೆ ನೀಡಿರುವ ಕಾಮಗಾರಿಗಳ ಅನುಷ್ಠಾನ ವೇಳಾಪಟ್ಟಿಯನ್ನು ಆಯುಕ್ತರು, ಬಿ.ಬಿ.ಎಂ.ಪಿ.ರವರು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ಮಾಹೆ ಎಂಪಿಕ್ ಸಭೆಗೆ ಸರ್ಕಾರಕ್ಕೆ ತಪ್ಪದೆ, ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ವಿಕೇಶ್ ಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ /ಲೆಕ್ಕಪತ್ರ ಬೆಂಗಳೂರು, ಕರ್ನಾಟಕ.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
4. ಎಲ್ಲಾ ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
7. ಹಾಪಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

(5)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-2016-17 ಮತ್ತು 2017-18ನೇ ಸಾಲುಗಳಲ್ಲಿ ನಗರೋತ್ಥಾನ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ರೂ.7300.00ಕೋಟಿಗಳ ಸರ್ಕಾರದ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:-1) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ರವರ ಪತ್ರ ಸಂಖ್ಯೆ: ಮುಅ/ ರಮೂಸೌ/ ಪಿಆರ್/ 08/ 2016-17, ದಿನಾಂಕ: 21-05-2016.

2) ಸರ್ಕಾರದ ಪತ್ರ ಸಂಖ್ಯೆ:ನಅಇ 199 ಎಸ್ಎಫ್ಸಿ 2016 (ಭಾಗ-1), ದಿನಾಂಕ: 25-05-2016.

3) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ರವರ ಪತ್ರ ಸಂಖ್ಯೆ: ಮುಅ/ ರಮೂಸೌ/ ಪಿಆರ್/ 37/ 2016-17, ದಿನಾಂಕ: 23-05-2016.

4) ಸರ್ಕಾರದ ಆದೇಶ ಸಂಖ್ಯೆ:ನಅಇ 47 ಎಸ್ಎಫ್ಸಿ 2016, ದಿನಾಂಕ: 14-06-2016.

ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರವು 2016-17ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಈ ಕೆಳಕಂಡಂತೆ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಅನುದಾನದ ವಿವರ	ಮೊತ್ತ	ಷರಾ
ಮುನಿಸಿಪಲ್ ಕಾರ್ಪೋರೇಷನ್‌ಗಳಿಗೆ ನೆರವು-ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ (ಬೆಂಗಳೂರು ನಗರ) 3604-00-191-3-18	100000.00	ಯೋಜನೆ
ಸರೋವರ ಅಭಿವೃದ್ಧಿ (Lake Development) 2217-80-001-0-08	5000.00	ಯೋಜನೆ
ಬೆಂಗಳೂರಿಗೆ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ 4217-01-800-0-02	215800.00	ಯೋಜನೆ
ಒಟ್ಟು	320800.00	

ಮೇಲ್ಕಂಡ ಅನುದಾನಗಳಿಗೆ ಸಂಬಂಧಿಸಿದಂತೆ ಆಯುಕ್ತರು, ಬಿಬಿಎಂಪಿ ರವರು ಮೇಲೆ ಓದಲಾದ (1)ರ ಪತ್ರದಲ್ಲಿ 2016-17 ಮತ್ತು 2017-18ನೇ ಸಾಲುಗಳಿಗೆ ಒಟ್ಟು ರೂ.7300.00ಕೋಟಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ, ಅನುಮೋದನೆಗೆ ಸಲ್ಲಿಸಿದ್ದು, ಸದರಿ ಕ್ರಿಯಾ ಯೋಜನೆಯ ಸಂಕ್ಷೀಪ್ತ ವಿವರಗಳು ಈ ಕೆಳಕಂಡಂತೆ ಇರುತ್ತವೆ.

---2.

(ರೂ. ಕೋಟಿಗಳು)

ಕ್ರ. ಸಂ	ಯೋಜನೆ	ಅನುದಾನದ ಒಟ್ಟು ಮೊತ್ತ	2016-17ನೇ ಸಾಲಿಗೆ ಮೀಸಲಿಟ್ಟಿರುವ ಅನುದಾನ	2017-18ನೇ ಸಾಲಿಗೆ ಮೀಸಲಿಟ್ಟಿರುವ ಅನುದಾನ
ಅ. ವಿಶೇಷ ಬಂಡಾವಾಳ				
ಹೊಸ ಕಾಮಗಾರಿ				
1	ಪ್ರಮುಖ ರಸ್ತೆಗಳಿಗೆ ವೈಟ್ ಟಾಪಿಂಗ್ ಒದಗಿಸುವುದು	200.00	100.00	100.00
2	ಬೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸುವುದು	200.00	50.00	150.00
3	ಗ್ರೇಡ್ ಸಪರೇಟರ್‌ಗಳ ನಿರ್ಮಾಣ	153.00	50.00	103.00
4	ಸಂಚಾರ ನಿರ್ವಹಣೆ (ಟಿ.ಇ.ಸಿ)	100.00	50.00	50.00
5	ವೈಟ್‌ಫೀಲ್ಡ್ ಮತ್ತು ಪೀಣ್ಯ ಕೈಗಾರಿಕಾ ಪ್ರದೇಶದ ಅಭಿವೃದ್ಧಿ	156.00	106.00	50.00
6	ಮಾರುಕಟ್ಟೆಗಳ ಅಭಿವೃದ್ಧಿ	25.00	11.50	13.50
7	ಬೃಹತ್ ನೀರುಗಾಲುವೆ ಅಭಿವೃದ್ಧಿ	800.00	200.00	600.00
8	ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಜಾಲದಲ್ಲಿ ಪರ್ಯಾಯ ಮಾರ್ಗಗಳನ್ನು ಅಭಿವೃದ್ಧಿಪಡಿಸುವುದು	1400.00	405.00	995.00
9	ಪಾದಚಾರಿ ಮಾರ್ಗಗಳ ಅಭಿವೃದ್ಧಿ	75.00	35.50	39.50
10	ಘನತ್ಯಾಜ್ಯ ನಿರ್ವಹಣಾ ಕಾಮಗಾರಿ	600.00	250.00	350.00
11	110 ಹಳ್ಳಿಗಳ ಅಭಿವೃದ್ಧಿ	250.00	250.00	0.00
ಮುಂದುವರೆದ ಕಾಮಗಾರಿ				
12	1. ಆದೇಶ ಸಂಖ್ಯೆ: ನಅಇ 326 ಎಂಎನ್‌ವೈ 2015 ದಿನಾಂಕ:19.06.2015 2. ಆದೇಶ ಸಂಖ್ಯೆ: ನಅಇ 449 ಎಸ್‌ಎಫ್‌ಸಿ 2015 ದಿನಾಂಕ:24.11.2015 3. ಆದೇಶ ಸಂಖ್ಯೆ: ನಅಇ 279 ಎಸ್‌ಎಫ್‌ಸಿ 2015 ದಿನಾಂಕ:08.01.2016	1476.00	650.00	826.00
	ಮೊತ್ತ (ಅ)	5435.00	2158.00	3277.00
ಆ. ನಗರೋತ್ಥಾನ ಯೋಜನೆ				
2016-17ನೇ ಸಾಲಿನಲ್ಲಿ ರೂ. 1000.00 ಕೋಟಿ ನಗರೋತ್ಥಾನ ಯೋಜನೆಗೆ ನಿಗಧಿಯಾಗಿರುವ ಅನುದಾನದಡಿ 2014-15 ಹಾಗೂ 2015-16ನೇ ಸಾಲಿಗೆ ನಿಗಧಿಪಡಿಸಿ, ಬಿಡುಗಡೆ ಮಾಡಿರುವ (ರೂ.2000.00ಕೋಟಿ – ರೂ.1300.00ಕೋಟಿ = ರೂ.700.00 ಕೋಟಿ) ಅನುದಾನ ಹೊರತುಪಡಿಸಿ ರೂ.700.00ಕೋಟಿಗಳನ್ನು ಮುಂದುವರೆದ ಕಾಮಗಾರಿಗಳಿಗೆ) ಉಳಿದ ಮೊತ್ತ ರೂ.1115.00ಕೋಟಿಗಳಲ್ಲಿ ಹೊಸ ಕಾಮಗಾರಿಗಳನ್ನು ಪ್ರಸ್ತಾಪಿಸಿದೆ.				

---3.

	ಹೊಸ ಕಾಮಗಾರಿ			
1	ಪ್ರಮುಖ ರಸ್ತೆಗಳಿಗೆ ವೈಟ್ ಟಾಪಿಂಗ್ ಒದಗಿಸುವುದು	600.00	209.00	391.00
2	ಈಜಿಪುರ ಗ್ರೇಡ್ ಸೆಪರೇಟರ್ ನಿರ್ಮಾಣ	204.00	50.00	154.00
3	ಶಿವಾನಂದ ಸರ್ಕಲ್ ಗ್ರೇಡ್ ಸೆಪರೇಟರ್ ನಿರ್ಮಾಣ	50.00	10.00	40.00
4	ಬಾಣಸವಾಡಿ ಮುಖ್ಯರಸ್ತೆಯಲ್ಲಿ IOC ಬಳಿ ಹಾಲಿ ರೈಲ್ವೆ ಮೇಲು ಸೇತುವೆಯನ್ನು ವಿಸ್ತರಿಸುವುದು	40.00	20.00	20.00
5	ಕೆರೆ ಅಭಿವೃದ್ಧಿ ಕಾಮಗಾರಿಗಳು	106.00	56.00	50.00
6	ಆಸ್ಪತ್ರೆಗಳು/ಕಟ್ಟಡಗಳು	75.00	35.00	40.00
7	ಆಟದ ಮೈದಾನಗಳು	40.00	20.00	20.00
	ಮುಂದುವರಿದ ಕಾಮಗಾರಿ			
8	1. ಆದೇಶ ಸಂಖ್ಯೆ: ನಅಇ 187 ಎಸ್ಎಫ್‌ಸಿ 2014 ದಿನಾಂಕ:27.01.2015 2. ಆದೇಶ ಸಂಖ್ಯೆ.ನಅಇ 278 ಎಸ್ಎಫ್‌ಸಿ 2015 ದಿ: 16.07.2015	700.00	600.00	100.00
	ಮೊತ್ತ (ಆ)	815.00	1000.00	815.00
	ಇ. ಕೆರೆ ಅಭಿವೃದ್ಧಿ			
1	ಕೆರೆ ಅಭಿವೃದ್ಧಿ ಕಾಮಗಾರಿಗಳು	50.00	50.00	0.00
	ಮೊತ್ತ (ಇ)	50.00	50.00	0.00
	ಒಟ್ಟು ಮೊತ್ತ	7300.00	3208.00	4092.00

ಮೇಲ್ಕಂಡ ರೂ.7300.00ಕೋಟಿಗಳ ಮೊತ್ತದ ಕ್ರಿಯಾ ಯೋಜನೆಯನ್ನು 2016-17 ಮತ್ತು 2017-18ನೇ ಸಾಲಿಗೆ ಅನುಮೋದನೆ ನೀಡುವ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿ, ಎರಡು ವರ್ಷಗಳ ಕ್ರಿಯಾ ಯೋಜನೆಯ ಒಟ್ಟು ಮೊತ್ತವನ್ನು ರೂ.6050.00ಕೋಟಿಗಳಿಗೆ ಮಿತಿಗೊಳಿಸುವಂತೆ ಆರ್ಥಿಕ ಇಲಾಖೆಯು ಸೂಚಿಸಿರುತ್ತದೆ. ಅದರನ್ವಯ, ಎರಡು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಗಳ ಮೊತ್ತವನ್ನು ರೂ.6050.00ಕೋಟಿಗಳಿಗೆ ಮಿತಿಗೊಳಿಸಿ, ಸಲ್ಲಿಸುವಂತೆ ಮೇಲೆ ಓದಲಾದ (2)ರ ಪತ್ರದಲ್ಲಿ ಆಯುಕ್ತರು, ಬಿಬಿಎಂಪಿ ರವರನ್ನು ಕೋರಲಾಗಿತ್ತು. ಈ ಬಗ್ಗೆ ಆಯುಕ್ತರು, ಬಿಬಿಎಂಪಿ ರವರು ಮೇಲೆ ಓದಲಾದ (3)ರ ಪತ್ರದಲ್ಲಿ ಮರು ಪ್ರಸ್ತಾವನೆ ಸಲ್ಲಿಸುತ್ತಾ, ಕೊರತೆ ಬೀಳಬಹುದಾದ ಅನುದಾನವನ್ನು 2017-18ನೇ ಸಾಲಿನ ಆಯವ್ಯಯದಲ್ಲಿ ಸರಿದುಗಿಸಿಕೊಳ್ಳಲು ಪರಿಗಣಿಸಬಹುದಾಗಿರುತ್ತದೆ ಎಂಬ ಅಭಿಪ್ರಾಯದೊಂದಿಗೆ ರೂ.7300.00ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ. ಮೇಲೆ ಓದಲಾದ (3)ರ ಪತ್ರದಲ್ಲಿ ಅನುಮೋದನೆಗೆ ಸಲ್ಲಿಸಿರುವ ಕಾಮಗಾರಿಗಳ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿದೆ.

(Rs. in Cr)

Sl No	Subject	Total Allocation	Allocation in 2016-17	Allocation in 2017-18
A.	**Capital Investment**			
1	White Topping	200.00	100.00	100.00
2	Tender SURE	200.00	50.00	150.00
3	Grade Seperators	153.00	50.00	103.00
4	Traffic Management	100.00	50.00	50.00
5	White Field / Peenya	156.00	106.00	50.00
6	Markets	25.00	11.50	13.50
7	SWD	800.00	200.00	600.00
8	Roads	1400.00	405.00	995.00
9	Footpaths	75.00	35.50	39.50
10	Solid Waste Management	600.00	250.00	350.00
11	110 Villages	250.00	250.00	0.00
12	Spillover Works 1. UDD 326 MNY 2015 Dt: 19.06.2015 2. UDD 449 SFC 2015 Dt: 24.11.2015 3. UDD 279 SFC 2015 Dt: 08.01.2016	1476.00	650.00	826.00
	Sub Total	**5435.00**	**2158.00**	**3277.00**
B.	**Nagarothana Grants**			
13	Fresh Work - White Topping	600.00	209.00	391.00
14	Ejipura Flyover	204.00	50.00	154.00
15	Shivananda circle Flyover	50.00	10.00	40.00
16	ROB at IOC, Banaswadi	40.00	20.00	20.00
17	Lakes	106.00	56.00	50.00
18	Hospitals/Buildings	75.00	35.00	40.00
19	Play Grounds	40.00	20.00	20.00
20	Spillover Works 1. UDD 187 SFC 2014 Dt: 27.01.2015 2. UDD 278 SFC 2015 Dt: 16.07.2015	700.00	600.00	100.00
	Sub Total	**1815.00**	**1000.00**	**815.00**
C.	**LAKES**			
21	Lake Development	50.00	50.00	0.00
	TOTAL	**7300.00**	**3208.00**	**4092.00**

ಆಯುಕ್ತರು, ಬಿಬಿಎಂಪಿ ರವರು ಸಲ್ಲಿಸಿರುವ ಮೇಲ್ಕಂಡ ರೂ.7300.00ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ ಮತ್ತೊಮ್ಮೆ ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಲಾಗಿ, ಆರ್ಥಿಕ ಇಲಾಖೆಯು ತನ್ನ ಹಿಂದಿನ ಸಹಮತಿಯನ್ನೆ ಪುನರ್ ಉಚ್ಚರಿಸಿ, ಕ್ರಿಯಾ ಯೋಜನೆಯ ಮೊತ್ತವನ್ನು ರೂ.6050.00ಕೋಟಿಗಳಿಗೆ ಮಿತಿಗೊಳಿಸುವಂತೆ ತಿಳಿಸಿರುತ್ತದೆ. ಆರ್ಥಿಕ ಇಲಾಖೆಯ ಅಭಿಪ್ರಾಯದೊಂದಿಗೆ ಬಿಬಿಎಂಪಿಯ ಪ್ರಸ್ತಾವನೆಯನ್ನು ರಾಜ್ಯ ಸಚಿವ ಸಂಪುಟದ ಮುಂದೆ ಮಂಡಿಸಿ, ಸಚಿವ ಸಂಪುಟದ ನಿರ್ಣಯದನ್ವಯ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

---5.

ಸರ್ಕಾರದ ಆದೇಶ ಸಂಖ್ಯೆ:ನಅಇ 199 ಎಸ್‌ಎಫ್‌ಸಿ 2016(ಭಾಗ-1),
ಬೆಂಗಳೂರು, ದಿನಾಂಕ: 21-06-2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ನಗರೋತ್ಥಾನ ಯೋಜನೆ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು 2016-17 ಮತ್ತು 2017-18ನೇ ಸಾಲಿನಲ್ಲಿ ಒಟ್ಟು ರೂ.7300.00ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳುವ ಈ ಕೆಳಕಂಡ ಕಾಮಗಾರಿಗಳ ಕ್ರಿಯಾ ಯೋಜನೆಗೆ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ.

(Rs. in Cr)

Sl No	Subject	Annexures	Total Allocation	Allocation in 2016-17	Allocation in 2017-18
	A. Capital Investment (Capital Support to Special Infrastructure Projects of Bangalore)				
1	White Topping	Annexure-1	200.00	100.00	100.00
2	Tender SURE	Annexure-2	200.00	50.00	150.00
3	Grade Seperators	Annexure-3	153.00	50.00	103.00
4	Traffic Management	Annexure-4	100.00	50.00	50.00
5	White Field / Peenya	Annexure-5	156.00	106.00	50.00
6	Markets	Annexure-6	25.00	11.50	13.50
7	SWD	Annexure-7	800.00	200.00	600.00
8	Roads	Annexure-8	1400.00	405.00	995.00
9	Footpaths	Annexure-9	75.00	35.50	39.50
10	Solid Waste Management	Annexure-10	600.00	250.00	350.00
11	110 Villages	Action plan to be approved by the Govt.	250.00	250.00	0.00
12	Spillover Works 1. UDD 326 MNY 2015 Dt: 19.06.2015 2. UDD 449 SFC 2015 Dt: 24.11.2015 3. UDD 279 SFC 2015 Dt: 08.01.2016	Annexure-11	1476.00	650.00	826.00
		Sub Total	**5435.00**	**2158.00**	**3277.00**
B. Nagarothana Grants					
13	Fresh Work - White Topping	Annexure-12	600.00	209.00	391.00
14	Ejipura Flyover	Annexure-13	204.00	50.00	154.00
15	Shivananda circle Flyover		50.00	10.00	40.00
16	ROB at IOC, Banaswadi		40.00	20.00	20.00
17	Lakes	Annexure-14	106.00	56.00	50.00
18	Hospitals/Buildings	Annexure-15	75.00	35.00	40.00
19	Play Grounds	Annexure-16	40.00	20.00	20.00
20	Spillover Works 1. UDD 187 SFC 2014 Dt: 27.01.2015 2. UDD 278 SFC 2015 Dt: 16.07.2015	Annexure-17	700.00	600.00	100.00
		Sub Total	**1815.00**	**1000.00**	**815.00**
C. LAKES					
21	Lake Development	Annexure-18	50.00	50.00	0.00
		TOTAL	**7300.00**	**3208.00**	**4092.00**

---6.

ಈ ಆದೇಶವನ್ನು ಕೆಳಕಂಡ ಷರತ್ತಿಗೊಳಪಟ್ಟು ಹೊರಡಿಸಲಾಗಿದೆ.

1. ಈ ಆದೇಶದಲ್ಲಿ ನೀಡಿರುವ ಅನುಮೋದನೆಯು ಕಾಮಗಾರಿಗಳ ಪಟ್ಟಿಗೆ ನೀಡಿರುವ ಅನುಮೋದನೆಯೇ ಹೊರತು, ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ನೀಡಿರುವ ಆಡಳಿತಾತ್ಮಕ ಅನುಮೋದನೆಯಲ್ಲ, ಆದ್ದರಿಂದ, ಅನುಮೋದನೆಗೊಂಡ ಕಾಮಗಾರಿಗಳಿಗೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು ಡಿಪಿಆರ್‌ಗಳನ್ನು ಸಿದ್ಧಪಡಿಸಿ, ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಅನುಮೋದನೆ ಪಡೆದು, ರೂ.10.೦೦ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್‌ಗಳನ್ನು ಮಾಡಿ, ಸದರಿ ಪ್ಯಾಕೇಜ್ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು-2000, ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 20 ಇಜಿವಿ 2009 (4), ದಿನಾಂಕ 13-07-2009 ರಲ್ಲಿನ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಬಿಬಿಎಂಪಿ ವತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

2. ಈ ಯೋಜನೆಯ ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರೂ.10.೦೦ಕೋಟಿಗಳಿಗೆ ಕಡಿಮೆ ಇಲ್ಲದಂತೆ, ಪ್ಯಾಕೇಜ್‌ವಾರು ಕಾಮಗಾರಿಗಳನ್ನು ಮಾಡಿ, ಮೇಲೆ ಓದಲಾದ (4)ರ ಆದೇಶದಲ್ಲಿ ರಚಿಸಲಾದ ಅಧಿಕಾರಯುಕ್ತ ಸಮಿತಿಯಿಂದ ಹಾಗೂ ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸತಕ್ಕದ್ದು.

3. ಈ ಕ್ರಿಯಾ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿರುವ ಕಾಮಗಾರಿಗಳು ಇತರೆ ಯಾವುದೇ ಯೋಜನೆ/ ಅನುದಾನದಡಿಯಲ್ಲಿ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಆಯುಕ್ತರು, ಬಿಬಿಎಂಪಿ ರವರು ಪೂರ್ವಾನ್ವಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

4. ಅನುಮೋದನೆ ನೀಡಲಾದ ಕ್ರಿಯಾಯೋಜನೆಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು, ಅನಿವಾರ್ಯ ಕಾರಣಗಳಿಂದ ಬದಲಾವಣೆಗಳು ಅತ್ಯಂತ ಅವಶ್ಯಕ ಎಂದು ಕಂಡು ಬಂದಲ್ಲ ಅಂತಹ ಕಾಮಗಾರಿಗಳನ್ನು ಸೂಕ್ತ ಸಮಜಾಯಿಷಿಯೊಂದಿಗೆ ಆಯುಕ್ತರು, ಬಿಬಿಎಂಪಿ, ಇವರು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

5. ಮೇಲೆ ಓದಲಾದ (4)ರ ಆದೇಶದಲ್ಲಿ ರಚಿಸಲಾಗಿರುವ ಅಧಿಕಾರಯುಕ್ತ ಸಮಿತಿಯು ಈ ಆದೇಶದಲ್ಲಿ ಅನುಮೋದಿಸಲಾದ ಕಾಮಗಾರಿಗಳ ಪ್ರಗತಿ ಪರಿಶೀಲನೆಯನ್ನು ಆಗಿಂದ್ದಾಗೆ ನಡೆಸತಕ್ಕದ್ದು.

6. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಬಿಬಿಎಂಪಿಯ ಪ್ರಧಾನ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರು ನಿಗಾವಹಿಸಿ, ಉತ್ತಮ ಗುಣಮಟ್ಟದ ಆಸ್ತಿ ಸೃಜನೆಗೆ ಕಟ್ಟು ನಿಟ್ಟಿನ ಕ್ರಮವಹಿಸತಕ್ಕದ್ದು.

7. ಆಯುಕ್ತರು, ಬಿಬಿಎಂಪಿ ರವರು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರತಿಷ್ಠಿತ ಸಂಸ್ಥೆಗಳಿಂದ ಗುಣಮಟ್ಟದ ತಪಾಸಣಾ ಕೈಗೊಂಡು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

8. ಅನುಮೋದಿತ ಕಾಮಗಾರಿಗಳನ್ನು 2016-17 ಮತ್ತು 2017-18ನೇ ಸಾಲಿನಲ್ಲಿ ನಗರೋತ್ಥಾನ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯ ಅನುದಾನಗಳಡಿ ಅನುಷ್ಠಾನಗೊಳಿಸುವುದು.

---7.

9. ಈ ಆದೇಶದಲ್ಲಿ ಅನುಮೋದನೆ ನೀಡಿರುವ ಮೊತ್ತಕ್ಕಿಂತ ಕಾಮಗಾರಿಗಳ ಅನುಷ್ಠಾನ ಮೊತ್ತವು ಹೆಚ್ಚುವರಿಯಾದಲ್ಲಿ ಸದರಿ ಹೆಚ್ಚುವರಿ ಅನುದಾನವನ್ನು ಬಿಬಿಎಂಪಿಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು. ಸರ್ಕಾರದಿಂದ ಹೆಚ್ಚುವರಿ ಅನುದಾನವನ್ನು ಒದಗಿಸಲಾಗುವುದಿಲ್ಲ.

10. ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳ ಅನುಷ್ಠಾನ ವೇಳಾ ಪಟ್ಟಿಯನ್ನು ಆಯುಕ್ತರು, ಬಿಬಿಎಂಪಿ ರವರು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ಮಾಹೆ ಎಂಪಿಕ್ ಸಭೆಗೆ ಸರ್ಕಾರಕ್ಕೆ ತಪ್ಪದೆ, ಸಲ್ಲಿಸತಕ್ಕದ್ದು.

ಈ ಆದೇಶವನ್ನು ದಿನಾಂಕ:07-06-2016 ರಂದು ನಡೆದ 9ನೇ ಸಚಿವ ಸಂಪುಟ ಸಭೆಯು ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು 1977ರ ಮೊದಲನೇ ಅನುಸೂಚಿ ಐಟಂ-16(2)(ಎ)ರಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ಪ್ರಕರಣ ಸಂಖ್ಯೆ:ಸಿ:269/2016ರಲ್ಲಿ ಕೈಗೊಂಡ ನಿರ್ಣಯದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಎನ್ ಕಲಾಮತಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಲೆಕ್ಕ ಪರಿಶೋಧನೆ/ಲೆಕ್ಕಪತ್ರ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ), ವಿಧಾನಸೌಧ, ಬೆಂಗಳೂರು.
4) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಪ್ರಕರಣ ಸಂಖ್ಯೆ:ಸಿ:269/2016, ದಿನಾಂಕ:07-06-2016).
5) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
6) ಜಂಟಿ ನಿರ್ದೇಶಕರು (ಯೋಜನೆ), ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
7) ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
8) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
9) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Annexure to The G.O No. UDD 199 SFC 2016 (P-1), Dated: 21 -06-2016

ಅನುಬಂಧ–15

Action Plan for Development of Buildings and Hospitals during 2016-17 and 2017-18 under GoK Budget Grants-2016-17

Sl No.	Name of Work	Amount in Lakhs	Amount for the year 2016-17 (Rs. in Lakhs)	Amount for the year 2017-18 (Rs. in Lakhs)
PART- A (Hospitals and Schools)				
1	Construction of Hospital building at ward No-11 Kuvempunagara in Byatarayanapura Assembly Constituency, Yelahanka Zone.	70.00	40.00	30.00
2	Construction of hospital building at ward No-07 Byatarayanapura	70.00	40.00	30.00
3	Construction of hospital building at ward No-08 Kodigehalli	50.00	40.00	10.00
4	Renovation to Maternity Hospital in Ward No, 137	75.00	37.50	37.50
5	Construction and Repairs of Anganawadi Building Main Gate at Vinobhanagar, Toilet Blocks in Shambu palya, Rajagopal Garden, Narayanaswamy Garden, Lalbag 4th Cross, Ramanna Garden in ward-118	40.00	30.00	10.00
6	Improvements to BBMP Naganna School building in Bannappa park road in Ward No.119	16.00	16.00	0.00
7	Improvements to BBMP Motinagar School building in Kalasipalya new extension in Ward No.119	20.00	20.00	0.00
8	Improvements to BBMP Offices Building (Dasappa Hospital premises) in Ward No.119	20.00	20.00	0.00
9	Improvements to BBMP Dasappa Hospital building in Ward No.119	20.00	20.00	0.00
10	Improvements to Pobatti hospital at sajjan rao circle in ward-143	40.00	20.00	20.00
11	Renovation to Maternity Hospital 2nd Cross, Magadi Road in Ward no. 121	70.00	35.00	35.00
12	Construction of Anganawadi building providing open Gym and Tailoring Centre in Ward No. 33	40.00	20.00	20.00
13	Construction of dialysis building with equipments (R.O Plant) at ward no.177,178 and 179	80.00	80.00	0.00
14	Construction of Anganwadi buildings in K.R.Puram Constituency	70.00	35.00	35.00
15	Construction of qtrs, Compound wall and School Building in K.R.Puram Constituency	80.00	40.00	40.00
16	Construction of Hospital Building in Hormavu Agara in K.R.Puram Constituency	80.00	40.00	40.00